# ಚೇತನಗಳ ಲೋಕ

ಹುಟ್ಟಿನಂತೆಯೆ ಸಾವು ನಿಗೂಢವಾದದ್ದು. ಹುಟ್ಟನ್ನು ನಿರೀಕ್ಷಿಸುವಾಗ ಸಂಭ್ರಮ, ಸಡಗರ, ಆನಂದದ ಕ್ಷಣಗಣನೆಯಿರುತ್ತದೆ. ಸಾವು ಸಂಭವಿಸಿದಾಗ ಕೇವಲ ದುಃಖ, ಆಕ್ರಂದನವಷ್ಟೆ ಅಲ್ಲ. ನಿನ್ನೆ ಮೊನ್ನೆಯವರೆಗೆ ಇದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಇಲ್ಲವಾದದ್ದು ಹೇಗೆ ಎಂಬ ಸೋಜಿಗ ಬೆನ್ನು ಹತ್ತುತ್ತದೆ. ಅನಾದಿಕಾಲದಲ್ಲಿಯೆ ಅರಣ್ಯವಾಸಿಗಳಾಗಿದ್ದ ಬುಡಕಟ್ಟು ಜನಕ್ಕೆ ಈ ವಿಚಾರ ಹೊಳೆದಿರಬೇಕು. ಶರೀರವು ಮತ್ತು ಶ್ವಾಸವು ಪಂಚಭೂತಗಳಲ್ಲಿ ಲೀನವಾದವು ಎಂದು ಸುಮ್ಮನಿರಲಾರದೇ ಹೋದ. ದುಃಖ ಮುಗಿದ ಮೇಲೆ ಭಯ ಮತ್ತು ಸೋಜಿಗ ಕಾಡಲು ಪ್ರಾರಭಿಸಿದವು. ಮನುಷ್ಯನ ಚೇತನ ಶರೀರದ ಹೊರತಾಗಿಯೂ ಎಲ್ಲೋ ಇರುತ್ತದೆ ಎಂದು ನಂಬಿದ. ಒಂದು ಪ್ರಾಣಿ ಸತ್ತು ಹೋದರೆ ಯಾರೂ ಹಾಗೆ ಯೋಚಿಸುವುದಿಲ್ಲ. ಆದರೆ ಮನುಷ್ಯ ಕೇವಲ ಪ್ರಾಣಿಯಲ್ಲ. ಅವನು ಜ್ಞಾನಿಯಾಗಿದ್ದವನು, ಧೀರನಾಗಿದ್ದವನು, ಯೋಧನಾಗಿದ್ದವನು. ರಾಜಕಾರಣಿಯಾಗಿದ್ದವನು, ಋಷಿಯಾಗಿದ್ದವನು, ಪವಾಡಗಳನ್ನು ತೋರಿಸಿ ಬಲ್ಲವನು. ಇಂತಹವನು ಸುಮ್ಮನೆ ಹಾಗೆಯೆ ದೇಹವನ್ನು ಒಗೆದು ಹೊರಟುಹೋಗುವುದು ಸಾಧ್ಯವೆ? ಇಲ್ಲ, ಅವನು ಉಳಿಯುತ್ತಾನೆ. ಚೈತನ್ಯ ಸ್ವರೂಪಿಯಾಗಿ ತನ್ನ ಮೂಲ ಗುಣಗಳ ಪ್ರತಿರೂಪದಲ್ಲಿ ಅಗೋಚರವಾಗಿರುತ್ತಾನೆ. ಸತ್ತವನು ಸಭ್ಯನಾಗಿದ್ದರೆ ತನ್ನ ಆಪ್ತೇಷ್ಟರಿಗೆ, ಪ್ರೀತಿಪಾತ್ರರಿಗೆ ತನ್ನ ಕುಲಕ್ಕೆ ರಕ್ಷಕನಂತೆ ಇರುತ್ತಾನೆ ಅಥವಾ ಅವನೊಬ್ಬ, ಸೋಮಾರಿಯಾಗಿದ್ದರೆ, ಸ್ವಾರ್ಥಿಯಾಗಿದ್ದರೆ ಮತ್ತಷ್ಟು ಅನುಭವಿಸಲು ಕಾತರಿಸುತ್ತಾನೆ, ಹಪಹಪಿಸುತ್ತಾನೆ.

ಭೂತ ಪ್ರೇತಗಳ ಪರಿಕಲ್ಪನೆ ಹೀಗೆಯೆ ಬಂದಿರಬೇಕು. ಈ ಪರಿಯ ಪ್ರಭೇದ ಹೇಗೆ ಹುಟ್ಟಿತು ಎಂಬುದು ಅಚ್ಚರಿ ಹುಟ್ಟಿಸುವಂಥದ್ದೆ. ಅಗಲಿದ ಆತ್ಮ ತನ್ನ ಭೌತಿಕ ಶರೀರ ಸಮಾಧಿಯಾದ ಸ್ಥಳದಲ್ಲಿಯೆ ಸುಳಿದಾಡುತ್ತಿದ್ದರೆ ಅದು ಅತೃಪ್ತ ಜೀವವಾಗಿತ್ತು ಎಂದರ್ಥ. ತನ್ನ ಐಹಿಕ ಸುಖಭೋಗಗಳನ್ನು ಬಿಟ್ಟು ತೆರಳಲಾಗುತ್ತಿಲ್ಲವೆಂಬ ಯಾತನೆಯಿಂದ ಅದು ನರಳುತ್ತದೆ. ಅದೇ ಪ್ರೇತ. ಸಚ್ಚಾರಿತ್ರ್ಯನೂ, ಸಂಭಾವಿತನೂ ಆಗಿದ್ದು ಸಾಧನೆಗಳಿಂದ ಸಂಪ್ರೀತನಾಗಿದ್ದರೆ ಅಂಥವನ ಆತ್ಮ ಬದುಕುಳಿದ ತನ್ನವರ ಒಳಿತಿಗೆ ಮತ್ತಷ್ಟು ಶ್ರಮಿಸಲು ಬಯಸುತ್ತದೆ ಎಂಬುದು ಇಂಗಿತ. ಅದು ಭೂತ. ಅಂತಹವರ ಅಗತ್ಯವೇ ಇಂಥ ನಂಬಿಕೆಗಳನ್ನು ಹುಟ್ಟಿಸಿರಬೇಕು. ಅವರನ್ನು ತಮ್ಮ ಬದುಕಿನೊಂದಿಗೆ ಮುಂದುವರೆಸುವುದು ಮುಖ್ಯವೆಂದು ಅನಿಸಿರಬೇಕು.

ಇನ್ನೂ ಒಂದು ಪ್ರಭೇದವಿದೆ. ಅದನ್ನು ಪೂಜಿಸಲಾಗದು, ಸಂತೃಪ್ತಿಗೊಳಿಸಲಾಗದು. ಅದರಿಂದ ಬಿಡುಗಡೆ ಪಡೆಯುವುದೇ ಲೇಸು. ಅದೇ ದೆವ್ವ. ಆ ವ್ಯಕ್ತಿ ದುಷ್ಟಬುದ್ಧಿಯುಳ್ಳವನು, ಬದುಕಿರುವಾಗಲೇ ಪೈಶಾಚಿಕವಾಗಿರುತ್ತಾನೆ. ಇನ್ನೊಬ್ಬರಿಗೆ ಕೇಡುಕುಂಟು ಮಾಡುವುದೇ ಅವನ ಕಾಯಕ. ಅವನು ಕಟುಕ, ಹಿಂಸ್ರಕನಾಗಿ ಬದುಕಿದವನು. ಅಂಥವನು ಸತ್ತಮೇಲೆ ಆ ಚೇತನವೂ ಕಂಟಕವಾಗುತ್ತದೆ, ದ್ವೇಷಿಯಾಗುತ್ತದೆ. ದಾನವ ಸ್ವರೂಪಿಯಾದ ಅದು ವರ್ಜ್ಯ. ಆದ್ದರಿಂದ ದೆವ್ವವನ್ನು ಬಿಡಿಸಲೇಬೇಕು.

ಜನಪದರು ಆರಾಧಿಸುವುದು ಭೂತಗಳನ್ನು, ದೆವ್ವಗಳನ್ನಲ್ಲ. ಹಿಮಾಲಯದ ಶ್ರೇಣಿಗಳಲ್ಲಿ, ದಕ್ಷಿಣ ಭಾರತದ ಕರಾವಳಿಯಲ್ಲಿ ಭೂತಾರಾಧನೆಯ ಪದ್ಧತಿಯಿದೆ. ಸಮಾಜಕ್ಕೆ, ಸಮುದಾಯಕ್ಕೆ ಹಿತ ಬಯಸುವ ಜನಪದೀಯ ಆಚರಣೆಗಳು ಇವು. ಒಬ್ಬ ವ್ಯಕ್ತಿಗಿದ್ದ ದೈವೀಗುಣಗಳ ಕಾರಣದಿಂದಲೇ ಆ ಚೇತನಕ್ಕೆ (Spirit) ಪಾರಲೌಕಿಕ ಶಕ್ತಿಯಿದೆ ಎಂಬ ನಂಬಿಕೆಯನ್ನು ಇರಿಸಿಕೊಳ್ಳಲಾಗಿದೆ. ಆತ ಜನರನ್ನು ಸರಿದಾರಿಯಲ್ಲಿ ನಡೆಸಬಲ್ಲವನು, ನ್ಯಾಯಕೊಡಬಲ್ಲವನು, ಸಮುದಾಯದ ಮೇಲ್ವಿಚಾರಣೆ ಮಾಡುವವನು. ವೈಭವೀಕರಿಸಿದ ಇಂಥವರ ಕಥೆಗಳೇ ಪುರಾಣದೊಂದಿಗೆ ಬೆಸೆದುಕೊಂಡು ಗ್ರಾಮದೇವತೆಗಳಾಗಿರುವ ಸಾಧ್ಯತೆಗಳಿವೆ. ಗ್ರಾಮದೇವತೆಗಳ ಹಿನ್ನೆಲೆಯನ್ನು ಗಮನಿಸಿದರೆ ಕಲ್ಪಕತೆಗಿಂಥ ವ್ಯಕ್ತಿನಿಷ್ಠ ಜೀವನಾನುಭವದ ಹಿನ್ನೆಲೆಯೇ ಇರುತ್ತದೆ.

ಇಂದಿಗೂ ಹಳ್ಳಿಗಳಲ್ಲಿ ಸತ್ತವರು ಮೈಮೇಲೆ ಬರುವುದು ನಡೆದೇ ಇದೆ. ಇದನ್ನು ಮೌಢ್ಯವೆಂದು ತಳ್ಳಿಹಾಕಿಬಿಡಬಹುದು. ಆದರೂ ಮೈಮೇಲೆ ಬಂದವನು ಸ್ವಹಿತಕ್ಕಾಗಿಯೋ ಪರಹಿತಕ್ಕಾಗಿಯೋ ತನ್ನ ಹಿರೀಕರ ಆಶಯಗಳ ಮುಂದುವರಿಕೆಯನ್ನು ಬಯಸುತ್ತಿದ್ದಾನೆ ಎನ್ನುವುದು ಸುಳ್ಳಲ್ಲ. ಇವು ಮಾಟ, ಮಂತ್ರ ಮತ್ತಿತರ ವಾಮಾಚಾರಗಳಿಂದ ಹೊರತಾದುವು. ಆದರೆ ಇಲ್ಲಿಯೂ ದುಷ್ಟರ ಕೈ ಮೇಲಾಗಿ ಹುಸಿ ಚೇತನಗಳನ್ನು ಆವಾಹಿಸಿಕೊಂಡು ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಇತ್ತೀಚೆಗೆ ಹೆಚ್ಚಾಗಿದೆ. ನಿಧಿ ಶೋಧನೆಗಾಗಿಯೋ, ವಾಸಿಯಾಗದ ಕಾಯಿಲೆಯನ್ನು ಗುಣಪಡಿಸುತ್ತೇನೆಂತಲೋ ಮುಗ್ಧರನ್ನು ಶೋಷಿಸುತ್ತಿರುವುದು ನಿತ್ಯ ವರದಿಯಾಗಿದೆ. ಇನ್ನೂ ಮುಂದುವರೆದು ಮುಗ್ಧರ ಮೇಲೆ ಪ್ರಯೋಗಿಸುವ ಸಮ್ಮೋಹಿನಿ, ಪುನರ್ಜನ್ಮದ ವೃತ್ತಾಂತ ಮತ್ತಿತರ ಶಿಷ್ಟೀಕರಣಗೊಂಡ ಪ್ರದರ್ಶನ ವಿದ್ಯಮಾನಗಳು ಹಣಗಳಿಸುವ ಮಾರ್ಗೋಪಾಯಗಳಾಗಿವೆ. ಚೇತನಗಳ ದುರ್ಬಳಕೆಯೂ ಎಗ್ಗಿಲ್ಲದೆ ನಡೆಯುತ್ತಿದೆ.

ಸಾವಿಗಿರುವ ಭಯ ಮತ್ತು ಸೋಜಿಗದಿಂದ ಹುಟ್ಟಿದ ಜನಪದರ ಭೂತ ಪ್ರೇತಗಳು ಶಿಷ್ಟರಲ್ಲೂ ನಂಬಿಕೆ ಹುಟ್ಟಿಸಿದಮೇಲೆ ಅಪರ ಕರ್ಮಗಳು ಹೆಚ್ಚು ಪ್ರಾಶಸ್ತ್ಯ ಪಡೆದುಕೊಂಡಿವೆ. ದೈವಾರಾಧನೆಗಿಂತಲೂ ಶ್ರಾದ್ಧಕ್ಕೆ ಇರುವ ಶ್ರದ್ಧೆ, ಭಯ ಹೆಚ್ಚು.

■ ಮೂಚಿ

## ಮಾತೇ ಮುತ್ತು

★ ಬಹಳಷ್ಟು ಜನ 25ರಲ್ಲೇ ಸತ್ತಿರುತ್ತಾರೆ, ಆದರೆ 75 ಆಗುವ ತನಕವೂ ಅವರನ್ನು ಹೂಳಿರುವುದಿಲ್ಲ.

-ಬೆಂಜಮಿನ್ ಫ್ರಾಂಕ್ಲಿನ್

★ ಬೆಕ್ಕು ಬರುವುದಿಲ್ಲ ಮಗೂ,
ಹಾಲು ಮಡಕೆ ಮುಚ್ಚಿಡು
ಕತ್ತಲಲ್ಲಿ ಎಡವದಂತೆ ದೀಪವೊಂದು ಹಚ್ಚಿಡು

-ಸು.ರಂ.ಎಕ್ಕುಂಡಿ

★ ನಿಮ್ಮ ತಲೆ ಎತ್ತಿರಿ, ಗಲ್ಲವನ್ನೂ ಎತ್ತಿರಿ. ಬಹಳ ಮುಖ್ಯವಾಗಿ ಸದಾ ಮುಗುಳ್ನಗುತ್ತಿರಿ. ಏಕೆಂದರೆ ಜೀವನ ಎನ್ನುವುದು ಅತ್ಯಂತ ಸುಂದರ ಸಂಗತಿ. ಅದರಲ್ಲಿ ಮುಗುಳ್ನಗಲು ಸಾಕಷ್ಟು ಸಂಗತಿಗಳಿವೆ.

-ಮರ್ಲಿನ್ ಮನ್ರೋ

★ ದ್ವೇಷ ಬದುಕನ್ನು ಕತ್ತಲಾಗಿಸುತ್ತದೆ; ಪ್ರೀತಿ ಅದನ್ನು ಬೆಳಕಾಗಿಸುತ್ತದೆ.

-ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್)

★ ರಚನಾತ್ಮಕ ಕೆಲಸವಿಲ್ಲದೆ ಸತ್ಯಾಗ್ರಹ ನಡೆಸುವುದು, ಕ್ರಿಯಾಪದವಿಲ್ಲದ ವಾಕ್ಯ ರಚಿಸಿದಂತೆ.

-ಡಾ.ರಾಮಮನೋಹರ ಲೋಹಿಯಾ

★ ಭಯರಹಿತನಾಗಿರುವುದೇ ಅಸ್ತಿತ್ವದ ರಹಸ್ಯ. ಏನೇ ಬರಲಿ, ಯಾವತ್ತೂ ಭಯ ಪಡಬೇಡಿ, ಯಾರ ಮೇಲೂ ಅವಲಂಬಿತರಾಗಿದಿರಿ. ಎಲ್ಲ ಸಹಾಯಗಳನ್ನೂ ತಿರಸ್ಕರಿಸಿದ ಕ್ಷಣ ನೀವು ಸ್ವತಂತ್ರರಾಗುತ್ತೀರಿ.

-ಸ್ವಾಮಿ ವಿವೇಕಾನಂದ

★ ನಿಮ್ಮ ಬದುಕಿನ ಅವಧಿ ಸೀಮಿತ. ಹಾಗಾಗಿ ಬೇರೊಬ್ಬನಂತೆ ಬದುಕಿ ಆ ಸಮಯವನ್ನು ವ್ಯರ್ಥ ಮಾಡಬೇಡಿ.

-ಸ್ಟೀವ್ ಜಾಬ್ಸ್

★ ಭಾರತ ಗಾಯಗೊಂಡು ಬಿದ್ದಿದೆ. ಅದರ ಗಾಯ ಅದಕ್ಕೆ ಗಾಯ ಅನಿಸುತ್ತಿಲ್ಲ. ಅಸ್ಪೃಶ್ಯತೆ, ಜಾತಿ, ಮತೀಯತೆಯ ಗಾಯ ನಂಜಾಗಿ ಮೆದುಳಿಗೇರಿ ಭಾರತ ಹುಚ್ಚಾಗಿದೆ. ಈ ಗಾಯವನ್ನೇ, ಈ ಹುಚ್ಚನ್ನೇ ಸಮಾಜದಲ್ಲಿ 'ಸಂಸ್ಕೃತಿ' ಅಂತ, 'ಪರಂಪರೆ' ಅಂತ ಬಿಂಬಿಸಲಾಗಿದೆ.

-ದೇವನೂರು ಮಹಾದೇವ

★ ಸಂಗೀತವು ನನಗೆ ಕೆಟ್ಟ ಅನುಭವಗಳನ್ನು ಮರೆಯುವಂತೆ ಮಾಡುತ್ತದೆ. ನೀವು ನಿಮ್ಮ ಮನಸ್ಸಿನಲ್ಲಿ ರಾಗಗಳನ್ನು ಮತ್ತು ಕೆಟ್ಟ ನೆನಪುಗಳನ್ನು ಒಟ್ಟಿಗೇ ಇಟ್ಟುಕೊಳ್ಳಲು ಸಾಧ್ಯವಿಲ್ಲ.

-ಉಸ್ತಾದ್ ಬಿಸ್ಮಿಲ್ಲಾ ಖಾನ್

★ ನಾನು ಜೀವಿಸುವುದು ಹೇಗೆಂದು ಕಲಿಯುತ್ತಿದ್ದಾಗಲೇ, ಸಾಯುವುದು ಹೇಗೆಂದೂ ಕಲಿಯುತ್ತಿದ್ದೆ.

-ಲಿಯೊನಾರ್ಡೊ ಡ ವಿಂಚಿ